


‘ಮತ್ಸ್ಯಗಂಧ’ ಚಿತ್ರದಲ್ಲಿ ಪೃಥ್ವಿ ಅಂಬರ್

## ಸಂಭ್ರಮದ ಪರ್ಯಾಯಗಳು

ದೀರ್ಘ ಬಿಡುವಿನ ನಂತರ ಹಿರಿಯ ನಿರ್ದೇಶಕ ಗಿರೀಶ ಕಾಸರವಳ್ಳಿ ಮತ್ತೆ ಸಿನಿಮಾದಲ್ಲಿ ತೊಡಗಿಕೊಂಡಿರುವುದು ಸಿನಿಮಾವನ್ನು ಬೌದ್ಧಿಕ ಚಟುವಟಿಕೆಯನ್ನಾಗಿ ನೋಡುವ ಪ್ರೇಕ್ಷಕರಿಗೆ ಸಂತಸ ಉಂಟುಮಾಡುವ ಸಂಗತಿ. ಈ ಬಾರಿ ಗಿರೀಶರ ಸಿನಿಮಾಕ್ಕೆ ಬೀಜರೂಪವಾಗಿ ಯು.ಆರ್. ಅನಂತಮೂರ್ತಿ ಅವರ ‘ಆಕಾಶ ಮತ್ತು ಬೆಕ್ಕು’ ಕಥೆ ಒದಗಿಬಂದಿದೆ. ಇದೇ ವರ್ಷ, ತಮ್ಮ ನಿರ್ದೇಶನದ ಸಿನಿಮಾಗಳ ಹಿಂದಿನ ತಾತ್ವಿಕತೆಯನ್ನು ಚರ್ಚಿಸುವ ‘ಬಿಂಬ ಬಿಂಬನ’ (ಪ್ರ: ವೀರಲೋಕ) ಕೃತಿಯನ್ನು ಗಿರೀಶ ಕಾಸರವಳ್ಳಿ ರೂಪಿಸಿದ್ದಾರೆ. ಈ ಪುಸ್ತಕ ರೂಪುಗೊಳ್ಳುವಲ್ಲಿ ಕಥೆಗಾರ ಗೋಪಾಲಕೃಷ್ಣ ಪೈ ಕೈಜೋಡಿಸಿದ್ದಾರೆ.

ಮತ್ತೊಬ್ಬ ಹಿರಿಯ ನಿರ್ದೇಶಕ ಬರಗೂರು ರಾಮಚಂದ್ರಪ್ಪನವರ ‘ಸ್ವಪ್ನಮಂಟಪ’ ಸಿನಿಮಾ 2024ರಲ್ಲಿ ರೂಪುಗೊಂಡಿದೆ. ವಿಜಯ್ ರಾಘವೇಂದ್ರ ಮತ್ತು ರಂಜನಿ ರಾಘವನ್ ನಟನೆಯ ಈ ಸಿನಿಮಾ ಬರಗೂರರ ಕಾದಂಬರಿಯನ್ನು ಆಧರಿಸಿರುವಂತಹದ್ದು. ಬರಗೂರು ರಾಮಚಂದ್ರಪ್ಪನವರ ನಿರ್ದೇಶನದ ಇತ್ತೀಚಿನ ಸಿನಿಮಾಗಳು ವಿಶ್ವದ ವಿವಿಧ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿರುವುದರ ಹಿನ್ನೆಲೆಯಲ್ಲಿ, ‘ಸ್ವಪ್ನಮಂಟಪ’ ಬಗೆಗಿನ ನಿರೀಕ್ಷೆಗಳು ಹೆಚ್ಚಾಗಿವೆ.

ಪಿ. ಶೇಷಾದ್ರಿ ಅವರಿಗೆ ಅರವತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಿ ಅವರ ಸಿನಿಮಾಗಳು ಹಾಗೂ ಸಿನಿಮಾ ಅನುಭವ–ನೆನಪುಗಳ ಕುರಿತು ನಾಲ್ಕು ಪುಸ್ತಕಗಳು (ಪ್ರ: ಅಂಕಿತ ಪುಸ್ತಕ) ಪ್ರಕಟಗೊಂಡಿರುವುದೂ ಚಿತ್ರೋದ್ಯಮದ ಪರ್ಯಾಯ ಸಂಭ್ರಮದ ರೂಪದಲ್ಲಿಯೇ ನೋಡಬೇಕು.

ಕನ್ನಡ ಚಿತ್ರರಂಗದ 90 ವರ್ಷಗಳ ಪಯಣದಲ್ಲಿನ 90 ಪ್ರಮುಖ ಸಿನಿಮಾಗಳನ್ನು ಮೈಲಿಗಲ್ಲಿನ ರೂಪದಲ್ಲಿ ಗುರ್ತಿಸುವ ‘ಚಂದನವನದ ಚಿಲುಮೆಗಳು’ ಕೃತಿಯನ್ನು ಪತ್ರಕರ್ತರಾದ ಶರಣು ಹುಲ್ಲೂರು ಹಾಗೂ ಎಸ್. ಶ್ಯಾಮ್ ಪ್ರಸಾದ್ ರೂಪಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಈ ಪುಸ್ತಕದ ನಿರೂಪಣೆಯಿದ್ದು, ‘ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿ’ ಪುಸ್ತಕ ಪ್ರಕಟಿಸಿದೆ.



ಅಂಕಿತಾ, ವಿಹಾನ್ ಜುಗಲಬಂದಿಯ ‘ಇಬ್ಬನಿ ತಬ್ಬಿದ ಇಳೆಯಲಿ’

ಹುಟ್ಟಿಸಿದ್ದ ಪೃಥ್ವಿ, ‘ಹದಿನೇಳೆಂಟು’ ಸಿನಿಮಾದ ಮೂಲಕ ಕನ್ನಡದ ಭರವಸೆಯ ನಿರ್ದೇಶಕರಲ್ಲಿ ಮುಂಚೂಣಿಯಲ್ಲಿದ್ದಾರೆ. ಪೃಥ್ವಿ ಅವರು ತಮ್ಮ ‘ರೈಲ್ವೆ ಚಿಲ್ಡ್ರನ್’ ಹಾಗೂ ‘ಹದಿನೇಳೆಂಟು’ ಸಿನಿಮಾಗಳನ್ನು ಯೂಟ್ಯೂಬ್ ಮೂಲಕ ಪ್ರೇಕ್ಷಕರು ನೋಡಲು ಅವಕಾಶ ಕಲ್ಪಿಸಿದ್ದು ಕೂಡ ಕನ್ನಡ ಚಿತ್ರರಂಗದ ಮಟ್ಟಿಗೆ ಒಂದು ಪ್ರಯೋಗವೇ.

ಉತ್ಸವ್ ಗೋನವಾರ ನಿರ್ದೇಶನದ ‘ಫೋಟೊ’ 2024ರಲ್ಲಿ ತೆರೆ ಕಂಡ ವಿಶಿಷ್ಟ ಸಿನಿಮಾಗಳಲ್ಲೊಂದು. ಕೊರೊನಾ ಲಾಕ್‌ಡೌನ್ ಸಮಯದಲ್ಲಿ ನಗರದಿಂದ ನೂರಾರು ಕಿಲೋಮೀಟರ್ ದೂರದ ಹಳ್ಳಿಗೆ ಮಗನೊಂದಿಗೆ ಕಾಲ್ನಡಿಗೆಯಲ್ಲಿ ಹೊರಟ ಅಪ್ಪನ ದುರಂತಕಥೆಯ ‘ಫೋಟೊ’ ನೋಡುಗರ ಮನಸ್ಸಿನೊಳಗೆ ಬಹುಕಾಲ ಉಳಿಯುವ ಶಕ್ತಿಯುಳ್ಳದ್ದು. ಚಂಪಾ ಶೆಟ್ಟಿ ನಿರ್ದೇಶನದ ಎರಡನೇ ಸಿನಿಮಾ ‘ಕೋಳಿ ಎಸ್ರು’ ವರ್ಷದ ಮತ್ತೊಂದು ಪ್ರಯೋಗಶೀಲ ಸಿನಿಮಾ. ‘ಹದಿನೇಳೆಂಟು’, ‘ಫೋಟೊ’ ಹಾಗೂ ‘ಕೋಳಿ ಎಸ್ರು’ ಸಿನಿಮಾಗಳು ವಿವಿಧ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಳ್ಳುವ ಮೂಲಕ ಕನ್ನಡದ ಛಾಪು ಮೂಡಿಸಿದವು.

ಸಿಂಪಲ್ ಸುನಿ ನಿರ್ದೇಶನದ ‘ಒಂದು ಸರಳ ಪ್ರೇಮಕಥೆ’ ಸಹೃದಯರ ಮೆಚ್ಚುಗೆಗೆ ಪಾತ್ರವಾದ ಪ್ರಯೋಗ. ‘ಬ್ಲಿಂಕ್’ (ನಿ: ಶ್ರೀನಿಧಿ ಬೆಂಗಳೂರು) ಸೈನ್ಸ್ ಫಿಕ್ಷನ್ ಪ್ರಿಯರ ಗಮನಸೆಳೆದ ಸಿನಿಮಾ. ‘ಶಾಖಾಹಾರಿ’ (ನಿ: ಸಂದೀಪ್ ಸುಂಕದ್) ಹಾಗೂ ‘ಮೂರನೇ ಕೃಷ್ಣಪ್ಪ’ (ನಿ: ನವೀನ್ ನಾರಾಯಣಘಟ್ಟ) ರಂಗಾಯಣ ರಘು ಅವರ ಪ್ರತಿಭೆಯನ್ನು ಸೊಗಸಾಗಿ ಬಳಸಿಕೊಂಡ ಸಿನಿಮಾಗಳು. ಕನ್ನಡ ಚಿತ್ರರಂಗಕ್ಕೆ ಅಗತ್ಯವಾದ ಕಡಿಮೆ ಬಜೆಟ್‌ನ ಅರ್ಥಪೂರ್ಣ ಸಿನಿಮಾ ಸಾಧ್ಯತೆಗಳಿಗೆ ನಿದರ್ಶನದ ರೂಪದಲ್ಲಿ ನೋಡಬಹುದಾದ ಸಿನಿಮಾಗಳಿವು. ಈ ನಿಟ್ಟಿನಲ್ಲಿ ಗಮನಿಸಬೇಕಾದ ಮತ್ತೊಂದು ಸಿನಿಮಾ ‘ಶೆಫ್ ಚಿದಂಬರ’ (ನಿ: ಎಂ. ಆನಂದರಾಜ್).

ಸಂದೀಪ್ ಸುಂಕದ್ ನಿರ್ದೇಶನದ ‘ಶಾಖಾಹಾರಿ’ ಹಾಗೂ ನವೀನ್ ನಾರಾಯಣಘಟ್ಟ ನಿರ್ದೇಶನದ ‘ಮೂರನೇ ಕೃಷ್ಣಪ್ಪ’, ಕಡಿಮೆ ಬಜೆಟ್‌ನಲ್ಲಿ ರೂಪುಗೊಂಡೂ ಗಮನಸೆಳೆದ ಸಿನಿಮಾಗಳು. ಈ ಎರಡೂ ಸಿನಿಮಾಗಳಲ್ಲಿ ರಂಗಾಯಣ ರಘು ಮುಖ್ಯ ಪಾತ್ರಗಳಲ್ಲಿ ನಟಿಸಿರುವುದು ವಿಶೇಷ. ಉತ್ತಮ ಕಥೆಯೊಂದನ್ನು ಆರಿಸಿಕೊಂಡು, ಕಡಿಮೆ ಬಜೆಟ್‌ನಲ್ಲಿ ಗಮನಾರ್ಹ ಚಿತ್ರವೊಂದನ್ನು ರೂಪಿಸುವ ಪ್ರಯತ್ನಗಳಾಗಿ ಗಮನಿಸಬಹುದಾದ ಚಿತ್ರಗಳಿವು.

ರಘು ಶಾಸ್ತ್ರಿ ನಿರ್ದೇಶನದ ‘ಲೈನ್‌ಮ್ಯಾನ್’ ವಿಭಿನ್ನ ಕಥಾಹಂದರದಿಂದ ಗಮನಸೆಳೆದ ಚಿತ್ರ. ಅಂತರರಾಷ್ಟ್ರೀಯ ಚಿತ್ರೋತ್ಸವಗಳ ಮೂಲಕ ಸುದ್ದಿಯಾಗಿದ್ದ ‘ಶಿವಮ್ಮ’